ಅಸಲು ದಾವಾ ನಂ.65/2008

ಪಿ ಡಬ್ಲ್ಯೂ-1

**ಸಾಕ್ಷಿಯನ್ನು ಇಂದು ದಿನಾಂಕಃ 04-12-2019 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಸ್.ಎ.ಪಿ . ವಕೀಲರಿಂದ .**

ನನ್ನ ಮನೆಯ ಪಶ್ಚಿಮದ ಗೋಡೆ ಮತ್ತು ಪ್ರತಿವಾದಿ ಮನೆಯ ಪಶ್ಚಿಮದ ಗೋಡೆ ಒಂದೆ ಲೈನ್‌ನಲ್ಲಿದೆ. ಮಧ್ಯ ಒಂದು ಗಲ್ಲಿ ಇದೆ. ಪ್ರತಿವಾದಿಗೆ ಮನೆ ಕಟ್ಟಲು ಪುರಸಭೆಯವರು ಪರವಾನಿಗೆ ನೀಡಿದರು ಎಂದರೆ ಗೊತ್ತಿಲ್ಲ. ಪ್ರತಿವಾದಿಯು ಮನೆ ಕಟ್ಟಲು ಅರ್ಜಿ ಹಾಕಿದಾಗ ನಾನು ಅದಕ್ಕೆ ತಕರಾರು ಹಾಕ್ಕಿದ್ದೇನು ಇಲವೊ ಎಂದರೆ ಪ್ರತಿವಾದಿ ಮನೆ ಕಟ್ಟುವ ಸಮಯದಲ್ಲಿ ದಾವಾ ಚಾಲ್ತಿಯಲ್ಲಿತ್ತು ಎಂದು ಸಾಕ್ಷಿ ನುಡಿಯುತ್ತಾರೆ.

ಪ್ರತಿವಾದಿಗೆ ಮನೆ ಕಟ್ಟಲು ಪುರಸಭೆಯವರು ಪರವಾನಿಗೆ ಕೊಟ್ಟಿದ್ದಾರೊ ಇಲ್ಲವೊ ಎಂಬುದು ಗೊತ್ತಿಲ್ಲ. ನಂತರ ಸಾಕ್ಷಿಯು ಪ್ರತಿವಾದಿ ಮನೆ ಕಟ್ಟಿದ ನಂತರ ಪರವಾನಿಗೆ ಪಡೆದುಕೊಂಡಿರುವುದು ಗೊತ್ತಾಗಿದೆ ಎಂದು ನುಡಿಯುತ್ತಾರೆ. ಪುರಸಭೆಗೆ ಹೋಗಿ ಪ್ರತಿವಾದಿ ಕಟ್ಟಡದ ಪರವಾನಿಗೆ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿಲ್ಲ. ನನಗೆ ಪ್ರತಿವಾದಿ ಪರವಾನಿಗೆ ತೆಗೆದುಕೊಂಡಿರುವುದು ಗೊತ್ತಾದ ನಂತರ ದೃಡಿಕೃತ ನಕಲನ್ನು ಪಡೆದುಕೊಂಡಿಲ್ಲ ಆದರೆ ಅರ್ಜಿಯನ್ನು ಸಲ್ಲಿಸಿದ್ದೆ. ಪುರಸಭೆಯವರುಪ್ರತಿವಾದಿಗೆ ಮನೆ ಕಟ್ಟಲು ಪರವಾನಿಗೆ ಕೊಡವುದಕ್ಕಿಂತ ಮೊದಲು ಸ್ಥಳಕ್ಕೆ ಭೇಟಿ ನೀಡಿ ನಂತರ ನೀಡಿದ್ದರು ಎಂದರೆ ಗೊತ್ತಿಲ್ಲ. ನಿಪಿ-13 ರಲ್ಲಿ ಎಡಗಡೆಯಲ್ಲಿ ಕಾಣುತ್ತಿರುವ ಕೇರು ಪ್ರತಿವಾದಿಯದ್ದು ಆಗಿರುತ್ತದೆ ಎಂದರೆ ಸರಿ. ಸದರಿ ಕೇರು ಪೂರ್ವ ದಿಕ್ಕಿಗೆ ಇದೆ ಎಂದರೆ ಸರಿ. ನಿಪಿ-13 ರಲ್ಲಿ ಕಾಣುತ್ತಿರುವ ನೀಲಿ ಬಣ್ಣ ಬಳಿದಿರುವ ಮನೆ ನನ್ನದಾಗಿರುತ್ತದೆ ಎಂದರೆ ಸರಿ. ಕೇರಿನ ಪೂರ್ವ ದಿಕ್ಕಿನಿಂದ ಉತ್ತರ ದಿಕ್ಕಿಗೆ ನಮ್ಮ ಮನಗೆ ಹೊಗುತ್ತೇವೆ ಎಂದರೆ ಅಡಚಣೆ ಆಗಿದೆ ಆದ್ದರಿಂದ್ದ ಹೊಗುತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಕೇರಿನ ಪೂರ್ವ ದಿಕ್ಕಿಗೆ ಇರುವ ಖುಲ್ಲಾ ಜಾಗದಿಂದ ನಮ್ಮ ಮನೆಗೆ ಹೊಗುತ್ತೇವೆ ಎಂದರೆ ಸರಿ. ನನಗೆ ಬುದ್ದಿ ಬಂದಾಗಿನಿಂದ ಪ್ರತಿವಾದಿ ಕೇರಿನ ಪೂರ್ವ ದಿಕ್ಕಿನಲ್ಲಿ ಇರುವ ಖುಲ್ಲಾ ಜಾಗದ ಮೂಲಕ ನಮ್ಮ ಮನಗೆ ಹೊಗುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಮತ್ತು ಕಷ್ಟ ಉಂಟು ಮಾಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ದಾವಾಸ್ತಿ ರಸ್ತೆ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೇರು ಇರುವ ಜಾಗ ಪ್ರತಿವಾದಿಯ ಮಾಲಿಕತ್ವದ ಜಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ನಮ್ಮ ರಸ್ತೆ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಈಗ ವಾದ ಪತ್ರದ ನಕಾಶೆಯನ್ನು ಸಾಕ್ಷಿಗೆ ತೋರಿಸಿದಾಗ ನನಗೆ ತಿಳಿಯುವುದು ಇಲ್ಲ ಎಂದು ಉತ್ತರಿಸಿರುತ್ತಾರೆ. ಗುರುತಿಗಾಗಿ ವಾದ ಪತ್ರದ ನಕಾಶೆಯನ್ನು ನಿಪಿ- 14 ಎಂದು ಗುರುತಿಸಲಾಯಿತು. ನಿಪಿ-14 ರಲ್ಲಿ ಈಗ ಎ. ಬಿ. ಎಂದು ಗುರುತಿಸಿದ ಸ್ಥಳದಿಂದ ನಾನು ನಮ್ಮ ಮನೆಗೆ ಹೊಗಬಹುದು ಎಂದರೆ ಸರಿಯಲ್ಲ. ನಿಪಿ-14 ರಲ್ಲಿ ಈಗ ಎ. ಸಿ. ಎಂದು ಗುರುತಿಸಿದ ಸ್ಥಳಂದಿಂದ ನಮ್ಮ ಮನಗೆ ಹೊಗಬಹುದು ಎಂದರೆ ಸರಿಯಲ್ಲ. ನನ್ನ ಮನೆಯ ಪೂರ್ವಕ್ಕೆ ಕಟಂಬಳೆ ಇವರ ಮನೆ ಇದೆ ಎಂದರೆ ಸರಿ. ನನ್ನ ಮತ್ತು ಕಟಂಬಳೆ ಮನೆಯ ದಕ್ಷಿಣಕ್ಕೆ 5 ಅಡಿ ಸಂದ್ದಿ ಇದೆ

ಎಂದರೆ ಸರಿ. ನಮ್ಮ ಮನೆ ಬಾಗಿಲವರೆಗೆ ಮಾತ್ರ ಸಂದ್ದಿ ಇದೆ ಎಂದು ಸಾಕ್ಷಿ ಮುಂದುವರಿದು ನುಡಿಯುತ್ತಾರೆ. ಪ್ರತಿವಾದಿಯು ಅಕ್ರಮವಾಗಿ ಯಾವುದೇ ಕಟ್ಟಡ ನಿರ್ಮಾಣ ಮಾಡಿಲ್ಲ ಮತ್ತು ಅಕ್ರಮವಾಗಿ ಯಾವುದೇ ಜಾಗದ ಕಬ್ಜಾ ಹೊಂದಿಲ್ಲ ಎಂದರೆ ಸರಿಯಲ್ಲ. ನಮ್ಮ ದಾರಿಯನ್ನು ಒತ್ತುವರಿ ಮಾಡಿ ಕಟ್ಟಡ ಮಾಡಿದ್ದಾರೆ. ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ಅಕ್ರಮವಾಗಿ ಕಟ್ಟಡ ಕಟ್ಟಿದ್ದಾರೆ ಮತ್ತು ಅಕ್ರಮವಾಗಿ ಜಾಗದ ಕಬ್ಜೆಯಲ್ಲಿದ್ದಾರೆ ಎಂದು ಬರೆದಿರುವುದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾಯು ಕಾಗದವನ್ನು
ಸೃಷ್ಟಿಸಿಕೊಡು ಹೆಚ್ಚು ಜಾಗವನ್ನು ಬರೆದುಕೊಂಡಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ನಮ್ಮ ರಸ್ತೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ</u>

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.